# ಮುಂಬಯಿ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ತಿಲಕರ ಪ್ರಭಾವ

ಶ್ವೇತಾ
ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಎಸ್.ವಿ.ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ.

DOI: https://doi.org/10.5281/zenodo.17411887

## ABSTRACT:

ಈ ಲೇಖನವು ಬಾಲಗಂಗಾಧರ ತಿಲಕರ (ಲೋಕಮಾನ್ಯ) ಪ್ರಭಾವವು ಮುಂಬಯಿ ಕರ್ನಾಟಕದ (ಇಂದಿನ ವಾಯುವ್ಯ ಕರ್ನಾಟಕ) ಸ್ವಾತಂತ್ರ್ಯ ಚಳುವಳಿಯ ಮೇಲೆ ಹೇಗೆ ಆಳವಾಗಿ ಬೇರೂರಿತು ಎಂಬುದನ್ನು ವಿಶ್ಲೇಷಿಸುತ್ತದೆ. ಧಾರವಾಡ, ಬೆಳಗಾಂ, ಬಿಜಾಪುರ ಜಿಲ್ಲೆಗಳು ಮತ್ತು ಸ್ಥಳೀಯ ಸಂಸ್ಥಾನಗಳನ್ನು ಒಳಗೊಂಡ ಈ ಪ್ರದೇಶದಲ್ಲಿ ತಿಲಕರು ತಮ್ಮ 'ಸ್ವರಾಜ್ಯ, ಸ್ವದೇಶಿ, ವಿದೇಶಿ ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣ' ಎಂಬ 'ಚತುಃಸೂತ್ರ'ದ ಮೂಲಕ ನವಚೈತನ್ಯ ತುಂಬಿದರು. ಅವರ ಪತ್ರಿಕೆಗಳಾದ 'ಕೇಸರಿ' ಮತ್ತು 'ಮರಾಠ' ರಾಷ್ಟ್ರೀಯತೆಯ ಜಾಗೃತಿ ಮೂಡಿಸಿದವು. ಗಣೇಶೋತ್ಸವ ಮತ್ತು ಶಿವಾಜಿ ಉತ್ಸವಗಳನ್ನು ಸಾರ್ವಜನಿಕವಾಗಿ ಆಚರಿಸುವ ಪದ್ಧತಿ ಜಾರಿಗೆ ತಂದು ಜನರನ್ನು ಸಂಘಟಿಸಿದರು. ಗಂಗಾಧರರಾವ್ ದೇಶಪಾಂಡೆ ಅವರಂತಹ ನಾಯಕರು ತಿಲಕರ ಪ್ರೇರಣೆಯಿಂದ ಹೋಮ್‌ರೂಲ್ ಲೀಗ್ ಮತ್ತು ಸ್ವದೇಶಿ ಚಳುವಳಿಯನ್ನು ಮುನ್ನಡೆಸಿದರು. ಒಟ್ಟಿನಲ್ಲಿ, ತಿಲಕರ ನೇತೃತ್ವವು ಮುಂಬಯಿ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಅಡಿಪಾಯ ಹಾಕಲು ಮತ್ತು ರಾಷ್ಟ್ರೀಯತೆಯನ್ನು ಜನಸಾಮಾನ್ಯರ ಬಳಿಗೆ ತರಲು ನಿರ್ಣಾಯಕವಾಯಿತು.

## KEYWORDS:

ಬಾಲಗಂಗಾಧರ ತಿಲಕ, ಮುಂಬಯಿ ಕರ್ನಾಟಕ, ಸ್ವರಾಜ್ಯ ಚಳುವಳಿ, ಸ್ವದೇಶಿ ಬಹಿಷ್ಕಾರ, ಕೇಸರಿ ಪತ್ರಿಕೆ.

ಇಂದಿನ ಕರ್ನಾಟಕ ರಾಜ್ಯದ ವಾಯುವ್ಯ ಭಾಗವಾಗಿರುವ ಗೋವಾ ಮತ್ತು ಮಹಾರಾಷ್ಟ್ರದ ಗಡಿಯನ್ನು, ಪೂರ್ವಕ್ಕೆ ಸ್ವಾತಂತ್ರ್ಯ ಪೂರ್ವದ ಹೈದರಾಬಾದ್ ನಿಜಾಮರಾಜ್ಯದ ಗಡಿಯನ್ನು, ದಕ್ಷಿಣಕ್ಕೆ ಏಕೀಕರಣದ ಪೂರ್ವದ ಮೈಸೂರು ರಾಜ್ಯದ ಗಡಿಯನ್ನು ಮತ್ತು ಪಶ್ಚಿಮಕ್ಕೆ ಅರಬ್ಬೀ ಸಮುದ್ರದ ತೀರವನ್ನು ಹಂಚಿಕೊಂಡಿದೆ. ಈ ಭೌಗೋಳಿಕ ಮಧ್ಯದ ಭಾಗವೇ ಮುಂಬಯಿ ಪ್ರಾಂತ್ಯದ ಕನ್ನಡ ಭಾಷಾ ಪ್ರದೇಶವಾಗಿದೆ. ಈ ಭೌಗೋಳಿಕ ಪ್ರದೇಶವು ಮುಂಬಯಿ ಕರ್ನಾಟಕವೆಂದೇ ಗುರ್ತಿಸಿಕೊಂಡಿದೆ. ಈ ಪ್ರಾಂತ್ಯವು ಮುಂಬಯಿ ಪ್ರೆಸಿಡೆನ್ಸಿಯ(ಪ್ರಾಂತ್ಯ) ದಕ್ಷಿಣ ಭಾಗವಾಗಿದ್ದು ಇಲ್ಲಿ ಮುಖ್ಯವಾಗಿ ಧಾರವಾಡ, ಬೆಳಗಾಂ, ಉತ್ತರಕನ್ನಡ ಮತ್ತು ಬಿಜಾಪುರ ಜಿಲ್ಲಾ ಕಂದಾಯ ವಿಭಾಗಗಳ ಜೊತೆಗೆ ಮುಧೋಳ, ಜಮಖಂಡಿ, ರಾಮದುರ್ಗ, ಸವಣೂರು ಹೀಗೆ ಅನೇಕ ಸಂಸ್ಥಾನಗಳನ್ನು ಕೂಡಾ ಈ ಪ್ರದೇಶವು ಒಳಗೊಂಡಿರುವುದನ್ನು ಕಾಣುತ್ತೇವೆ.

ರಾಷ್ಟ್ರೀಯ ಚಳುವಳಿಯ ಬೆಳವಣಿಗೆಯು ಆಧುನಿಕ ಭಾರತದ ಅತ್ಯಂತ ಪ್ರಮುಖ ವಿದ್ಯಮಾನವಾಗಿದೆ. 1857ರ ಸಿಪಾಯಿ ದಂಗೆಯ ನಂತರ ಭಾರತದ ಸ್ವಾತಂತ್ರ್ಯಕ್ಕಾಗಿ ಆರಂಭವಾದ ಅತಿದೊಡ್ಡ ಚಳುವಳಿ ಇದಾಗಿದೆ. ಚಳುವಳಿಯ ನೇತೃತ್ವವನ್ನು ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಮತ್ತು ಬುದ್ಧಿಜೀವಿಗಳು ವಹಿಸಿದ್ದರು. ಅವರಲ್ಲಿ ಪ್ರಮುಖವಾಗಿ ಸ್ವಾತಂತ್ರ್ಯ ಚಳುವಳಿಯನ್ನು ಮೊದಲ ಬಾರಿಗೆ ಜನಸಾಮಾನ್ಯರೆಡೆಗೆ ತಂದಿರುವಂತಹ ಬಾಲಗಂಗಾಧರನಾಥ ತಿಲಕರೊಬ್ಬರು.

ಕ್ರಿ.ಶ 1856 ರಲ್ಲಿ ಜನಿಸಿದ ತಿಲಕರು ಲೋಕಮಾನ್ಯರೆಂದು ಜನತೆಯಿಂದ ಕರೆಸಿಕೊಂಡ ಉಜ್ವಲ ರಾಷ್ಟ್ರಪ್ರೇಮಿ, ತತ್ವಜ್ಞಾನಿ, ಪತ್ರಕರ್ತ, ಸಮಾಜ ಸುಧಾರಕರಾಗಿ ನವಭಾರತ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ. 1880ರಲ್ಲಿ ತಿಲಕರು ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ್ದು ಶಿಕ್ಷಣಕ್ಷೇತ್ರದ ಮೂಲಕ ಮಿಷನರಿ ಶಾಲೆಗಳ ಮಾದರಿಯಲ್ಲೇ ರಾಷ್ಟ್ರೀಯ ಶಾಲೆಗಳನ್ನು ನಡೆಸುವ ವಿಚಾರದೊಂದಿಗೆ ತಿಲಕರು ತಮ್ಮ ಸ್ನೇಹಿತರಾದ ಅಗರ್‌ಕರ್‌ಎಂಬುವರೊಂದಿಗೇ 'ನ್ಯೂಇಂಗ್ಲೀಷ್ ಸ್ಕೂಲ್' ಆರಂಭಿಸಿದರು.[1] ಮುಂದೆ ಇದೇ ಸಂಸ್ಥೆ 'ಡೆಕ್ಕನ್‌ಎಜ್ಯುಕೇಶನ್ ಸೊಸೈಟಿ'ಯಾಗಿ ಹೊರಹೊಮ್ಮಿತು. ನಂತರ ಇದರ ಸದಸ್ಯರಾಗಿ, ಪೂನಾದ ಮುನ್ಸಿಪಾಲ್ಟಿ ಸದಸ್ಯರಾಗಿ, ಮುಂಬಯಿ ಶಾಸನ ಸಭೆಯ ಸದಸ್ಯರಾಗಿ, ಮುಂಬಯಿ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಭಾರತೀಯ ಹಕ್ಕುಗಳನ್ನು ಪ್ರತಿನಿಧಿಸಿದರು. ನಿಸ್ವಾರ್ಥ ದೇಶ ಸೇವಕರಾದ ಇವರು ಭಾರತೀಯರಲ್ಲಿ ಸ್ವರಾಜ್ಯ ಮತ್ತು ಸ್ವದೇಶ ತತ್ವಗಳನ್ನು ಜನಜನಿತಗೊಳಿಸಿದರು.

ಭಾರತದ ಸ್ವಾತಂತ್ರ್ಯದ ಹಿನ್ನಲೆಯಲ್ಲಿ ರಾಷ್ಟ್ರೀಯ ಚಳುವಳಿಯ ಇತಿಹಾಸವನ್ನು 3 ಹಂತಗಳಲ್ಲಿ ಕಾಣುತ್ತೇವೆ. 1885 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯೊಂದಿಗೆ ಆರಂಭಿಸಿ ಈ ಚಳುವಳಿಯನ್ನು 1905ರ ವರೆಗೆ ಮಂದಗಾಮಿಗಳ ಕಾಲ, 1905 ರಿಂದ 1920ರ ವರೆಗೆ ತೀವ್ರಗಾಮಿಗಳ ಕಾಲ ಮತ್ತು 1920 ರಿಂದ 1947ರ ಕಾಲಘಟ್ಟವನ್ನು ಗಾಂಧಿಯುಗವೆಂದು ಗುರ್ತಿಸುತ್ತೇವೆ. 1905 ರಿಂದ 1920ರ ಕಾಲಘಟ್ಟದಲ್ಲಿ ಭಾರತದ ರಾಷ್ಟ್ರೀಯ ಚಳುವಳಿಯ ಇತಿಹಾಸದಲ್ಲಿ ಮುಖ್ಯವಾಗಿ ಲಾಲಾಲಜಪತ್‌ರಾಯ್, ಬಿಪಿನ್ ಚಂದ್ರಪಾಲ್ ಮತ್ತು ಬಾಲಗಂಗಾಧರ ತಿಲಕರು ಕಂಡುಬರುತ್ತಾರೆ.

ಈ ಅವಧಿಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ತಿಲಕರು ರೂಪಿಸಿದ ಸ್ವದೇಶಿ ವಸ್ತುಗಳ ಬಳಕೆ, ವಿದೇಶಿ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣದ ಸ್ಥಾಪನೆ ಮತ್ತು

ಸ್ವರಾಜ್ಯ ಈ ನಾಲ್ಕು ಮಹಾಮಂತ್ರಗಳಿಂದ ದೇಶದಲ್ಲಿ ನವಚೈತನ್ಯ ಮೂಡಿಸಿದರು. ಮುಂಬಯಿ ಪ್ರಾಂತ್ಯದ ಕನ್ನಡ ಭಾಷಾ ಪ್ರದೇಶವು ದೇಶದ ಸ್ವಾತಂತ್ರ್ಯ ಚಳುವಳಿಯ ಆರಂಭದ ಪೂರ್ವದಿಂದಲೂ ಬ್ರಿಟಿಷರ ವಿರುದ್ಧವಾಗಿ ನಡೆದ ಅನೇಕ ಬಂಡಾಯಗಳನ್ನು ಇಲ್ಲಿ ಕಾಣುತ್ತೇವೆ. ಉದಾ: ಕಿತ್ತೂರಿನ ದಂಗೆ, (1824) ಸಿಂದಗಿಯ ಬಂಡಾಯ(1824) ಹಲಗಲಿಯ ಬೇಡರ ದಂಗೆ, ನರಗುಂದ ಭಾಸ್ಕರರಾವ್ ಬುವಾ (1846) ದಂಗೆ.

ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನ ಮುಂಬಯಿಯಲ್ಲಿ ನಡೆದಾಗ (1885) ಕನ್ನಡ ನಾಡಿನಿಂದ ನಾಲ್ವರು ಪ್ರತಿನಿಧಿಗಳು ಅದರಲ್ಲಿ ಪಾಲ್ಗೊಂಡಿದ್ದರು. ಅವರಲ್ಲಿ ಬೆಳಗಾವಿಯ ಬಾವುಸಾಹೇಬ ಬಾಟೆಯವರು ಒಬ್ಬರಾಗಿದ್ದಾರೆ. ಹೀಗಾಗಿ ಮುಂಬಯಿ ಪ್ರಾಂತ್ಯದ ಕನ್ನಡ ಪ್ರದೇಶವು ಆರಂಭದಿಂದಲೂ ರಾಷ್ಟ್ರೀಯ ಚಳುವಳಿಯಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. 1893ರಲ್ಲಿ ಧಾರವಾಡ ಹಾಗೂ ಬೆಳಗಾಂಗಳಿಗೆ ಕಾಂಗ್ರೆಸ್‌ನ ಧ್ಯೇಯಧೋರಣೆಗಳನ್ನು ಪ್ರಚಾರ ಮಾಡಲು ಸ್ವತ: ಎ.ಓ ಹ್ಯೂಂ ಅವರೇ ಬಂದಿದ್ದರು. ಅದಲ್ಲದೆ 'ಮುಂಬಯಿ ರಾಜ್ಯದ ರಾಜಕೀಯ ಪರಿಷತ್ತು' 1895 ರಲ್ಲಿ ದಿನ್ಷಾವಾಚಾ ಅವರ ಅಧ್ಯಕ್ಷತೆಯಲ್ಲಿ ಬೆಳಗಾಂನಲ್ಲಿ ನಡೆಯಿತು. ಈ ಹಿನ್ನಲೆಯಲ್ಲಿ ಈ ಪ್ರಾಂತ್ಯವು ರಾಷ್ಟ್ರೀಯ ಚಳುವಳಿಯ ಮುನ್ನಲೆಗೆ ಬೀಜಾಂಕುರವಾಯಿತು. ತಿಲಕರು ಆರಂಭಿಸಿದ ಮರಾಠಿ ಪತ್ರಿಕೆ 'ಕೇಸರಿ' ಮತ್ತು ಇಂಗ್ಲೀಷ್ ಪತ್ರಿಕೆ 'ಮರಾಠಿ' ಜನರಲ್ಲಿ ರಾಷ್ಟ್ರೀಯತೆಯ ಜಾಗೃತಿಯನ್ನು ಮೂಡಿಸುವಲ್ಲಿ ಅತ್ಯಂತ ಗಣ್ಯ ಪಾತ್ರವಹಿಸಿದವು. 'ಕೇಸರಿ' ಪತ್ರಿಕೆ ಅತ್ಯಧಿಕ ಪ್ರಸಾರವುಳ್ಳ ಪತ್ರಿಕೆಯಾಗಿ, ವೈಚಾರಿಕ ರಾಜಕೀಯ ಜನಾಂದೋಲನವನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸಿತು. ಇದು ಕೇವಲ ಮಹಾರಾಷ್ಟ್ರ ಮಾತ್ರದಲ್ಲದೆ ಮುಂಬಯಿ ಪ್ರಾಂತ್ಯದ ಕನ್ನಡ ಭಾಷಾ ಪ್ರದೇಶದ ಮೇಲೆ ಸ್ವಾತಂತ್ರ್ಯ, ಸ್ವಾಭಿಮಾನ, ಸ್ವದೇಶಾಭಿಮಾನಗಳನ್ನು ಪ್ರಚೋದಿಸುವ ಪತ್ರಿಕೆಯಾಗಿ ಹೊರಹೊಮ್ಮಿತು. ಬಿಜಾಪುರ, ಬೆಳಗಾಂ, ಧಾರವಾಡ, ಉತ್ತರಕನ್ನಡ ಪ್ರಮುಖ ನಗರಗಳು ಮಾತ್ರವಲ್ಲದೆ ಇಲ್ಲಿನ ಸಂಸ್ಥಾನಗಳು, ತಾಲೂಕು, ಗ್ರಾಮ ಮಟ್ಟದಲ್ಲಿಯೂ ಅವರ ಪತ್ರಿಕೆಯ ನೂರಾರು ಚಂದಾದಾರರು ಈ ಪ್ರದೇಶದಲ್ಲಿದ್ದರು. ಕುಮಟಾ ತಾಲೂಕಿನ ಬಸ್ತಿಕೇರಿಯ ಗೋವಿಂದ ನರಸಿಂಹ ಶಾನಭಾಗ ಅವರು ಹೇಳುವಂತೆ 1914 ರಿಂದಲೂ ನನ್ನ ಮೇಲೆ ರಾಷ್ಟ್ರೀಯತೆಯ ಪ್ರಭಾವ ಬೀರಿತ್ತು. 'ಕೇಸರಿ' ಮತ್ತು 'ಸಂದೇಶ' ಪತ್ರಿಕೆಗಳನ್ನು ತಪ್ಪದೆ ಓದುತಿದ್ದೆ. ನನ್ನ ಅಜ್ಜನವರಿಗೆ 'ಕೇಸರಿ' ಪತ್ರಿಕೆ ತೀರಾ ಪ್ರಿಯವಾದ ಪತ್ರಿಕೆಯಾಗಿತ್ತು. ನಾನು ಬಾಲ್ಯದಿಂದಲೂ ತಿಲಕರ ಅನುಯಾಯಿಯಾಗಿದ್ದು ಇವರ ಪ್ರೇರಣೆಯಿಂದ 1916 ರಲ್ಲಿ ಸ್ಥಳಿಯವಾಗಿ ಕೃಷ್ಣ ಕೆ. ಶೈಣೈ ಅವರ ಸಂಪಾದಕತ್ವದಲ್ಲಿ ಪ್ರಾರಂಭವಾದ 'ಕಾನಡಾ ವೃತ್ತ' ಮತ್ತು 'ಕ್ಯಾನರಾ ನ್ಯೂಸ್' ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದೆ ಎನ್ನುವರು.[2] ಹಾಗೆಯೇ ಹೊನ್ನಾವರದ ಮಹಾಬಲೇಶ್ವರ ಮಂಜುನಾಥ ಜೆ. ಅವರ ತಂದೆ ಹೊನ್ನಾವರದ ಮಿಶನ್ ಶಾಲೆಯ ಅಧ್ಯಾಪಕರಾಗಿದ್ದರು. ಇವರು 'ಕೇಸರಿ' ಮತ್ತು 'ಚಿತ್ರಮಯ ಜಗತ್ತು' ಎಂಬ ಮರಾಠಿ ಪತ್ರಿಕೆ ಓದುತ್ತಿದ್ದರು. ಅಷ್ಟೇ ಅಲ್ಲದೆ ಸಿದ್ದಾಪುರ ತಾಲೂಕಿನ ಪ್ರಥಮ ಪದವಿದರರಾದ ದೊಡ್ಮನೆಯ ನಾರಾಯಣಗಣೇಶ ಹೆಗ್ಗಡೆಯವರು ಪೂನದಲ್ಲಿ ಕಾಲೇಜು ಶಿಕ್ಷಣ ಮುಗಿಸಿದವರಾಗಿದ್ದು, ಕಾಲೇಜು ದಿನಗಳಿಂದಲೂ 'ಕೇಸರಿ' ಪತ್ರಿಕೆ ಅವರ ಮೇಲೆ ಪ್ರಭಾವ ಬೀರಿತ್ತು. ಈ ಪತ್ರಿಕೆಯನ್ನು ಸಿದ್ದಾಪುರ ಹಾಗೂ ಬೀಳಗಿಗಳಲ್ಲೂ ಕೆಲವರು ತರಿಸಿ ಓದುತ್ತಿದ್ದರು. ಕೆಲವರು ಪತ್ರಿಕೆಯನ್ನು ಓದುವ ಸಲುವಾಗಿಯೇ ಮರಾಠಿಯನ್ನು ಕಲಿಯುತ್ತಿದ್ದರು. ಹೀಗೆ ತಿಲಕರು ಮತ್ತು ಅವರ ಪತ್ರಿಕೆಗಳು ಈ ಪ್ರದೇಶದಲ್ಲಿ ಅನೇಕರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ಕಾಣಬಹುದು.

ಮುಂಬಯಿ ಪ್ರಾಂತ್ಯದ ಕನ್ನಡ ಭಾಷಾ ಪ್ರದೇಶದ ಮೇಲೆ ತಿಲಕರ ಪ್ರಭಾವ ಆಳವಾದದ್ದಾಗಿತ್ತು. ಅವರು ಅನೇಕ ಬಾರಿ ಈ ಭಾಗದಲ್ಲಿ ಸಂಚರಿಸಿ ರಾಷ್ಟ್ರೀಯ ಹೋರಾಟಕ್ಕೆ ಜನರಲ್ಲಿ ಜಾಗೃತಿಯನ್ನು ಮೂಡಿಸಿದ್ದಾರೆ. ರಾಷ್ಟ್ರೀಯತೆಯ ಉದಯಕ್ಕೆ ಕಾರಣವಾದ ಅನೇಕ ಸಂಗತಿಗಳು ಈ ಕನ್ನಡ ಪ್ರದೇಶದಲ್ಲಿ ನಡೆದವು. ಮುಂಬಯಿ ರಾಜ್ಯ ರಾಜಕೀಯ ಪರಿಷತ್ತು 1903 ರಲ್ಲಿ ಧಾರವಾಡದಲ್ಲಿ ನಡೆದ ಸಂದರ್ಭದಲ್ಲಿ ಫಿರೋಜ್ ಷಾ ಮೆಹ್ತಾ ಮತ್ತು ಬಾಲಗಂಗಾಧರ ತಿಲಕರು ಪಾಲ್ಗೊಂಡಿದ್ದರು. ತಿಲಕರಿಗೆ ಸಂಪೂರ್ಣ ಸ್ವರಾಜ್ಯ ಪಡೆಯುವುದು ಅವರ ಮುಖ್ಯ ಗುರಿಯಾಗಿತ್ತು. ಅದಕ್ಕಾಗಿ ಅವರು 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಮತ್ತು ನಾನು ಅದನ್ನು ಪಡೆದೇ ತೀರುತ್ತೇನೆ' ಎಂದು ಘೋಷಿಸಿದ್ದರು. ಮಾತ್ರವಲ್ಲದೆ 1906ರಲ್ಲಿ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷ ಪದವಿಯನ್ನು ವಂಚಿತರಾಗಿದ್ದ ಇವರು ಮಂದಗಾಮಿಗಳಲ್ಲಿ ಒಬ್ಬರಾದ ದಾದಾಬಾಯಿ ನವರೋಜಿ ಅಧ್ಯಕ್ಷರಾದರು. ಆಗ 'ಸ್ವರಾಜ್ಯ' ಬೇಡಿಕೆಗೆ ಘೋಷಿಸುವಂತೆ ಒತ್ತಾಯಿಸಿದರು. ಕೊನೆಗೂ ನವರೋಜಿಯವರು ಅಧ್ಯಕ್ಷ ಸ್ಥಾನದಿಂದ ಸ್ವರಾಜ್ಯ ಬೇಡಿಕೆಯನ್ನು ಘೋಷಿಸಿಯೇ ಬಿಟ್ಟರು. ಇದು ಅವರ ಪತ್ರಿಕೆಗಳ ಮೂಲಕ ದೇಶಾದ್ಯಂತ ಪ್ರಚಾರವಾಯಿತು. ಇದು ಮುಂಬಯಿ ಕನ್ನಡ ನೆಲದಲ್ಲಿಯೂ ಸ್ವರಾಜ್ಯದ ಬಗ್ಗೆ ಜಾಗೃತಿಯನ್ನು ಮೂಡಿಸಿತು.

ತಿಲಕರ ಪ್ರಭಾವದಿಂದ ಬಿಜಾಪುರ ಭಾಗದಲ್ಲಿ ಸ್ವರಾಜ್ಯ ಅಥವಾ ಸ್ವಾತಂತ್ರ್ಯ ಚಳುವಳಿಗೆ ಪ್ರಥಮ ಓಂಕಾರ ಹಾಕಿದವರು ದಿ. ಶ್ರೀನಿವಾಸರಾವ್‌ಕೌಜಲಗಿಯವರು. ಪ್ರಸಿದ್ಧ ವಕೀಲರು, ಲೋಕಮಾನ್ಯ ತಿಲಕರ ಸ್ನೇಹಿತರು ಆಗಿದ್ದ ಇವರು ಎಲ್ಲಾ ರಾಷ್ಟ್ರೀಯ ಚಳುವಳಿಗೂ ಇವರು ಆಶ್ರಯಕೊಟ್ಟು ಚಳುವಳಿಗಾರರಿಗೆಲ್ಲ ಊಟ ವಸತಿಗಳಿಗಾಗಿ ತಮ್ಮ ಮನೆಯನ್ನು ಮುಕ್ತದ್ವಾರವಾಗಿ ಇಟ್ಟಿದ್ದರು. ಎಲ್ಲಾ ಕಾಂಗ್ರೆಸ್ ಅಧಿವೇಶನಗಳಿಗೂ ತಪ್ಪದೆ ಹೋಗಿ ತಿಲಕರ ಶಿಷ್ಯರೊಳಗೆ ಅಗ್ರ ಗಣ್ಯರಾಗಿ ಮೆರೆದವರಾಗಿದ್ದಾರೆ. ಅಸಹಕಾರ ಚಳುವಳಿಯ ಸಂದರ್ಭದಲ್ಲಿ ವಕೀಲಿ ವೃತ್ತಿಗೆ ಶರಣು ಹೊಡೆದು ಚಳುವಳಿ ಪ್ರಚಾರಕ್ಕೆಂದೇ ಸಂಪೂರ್ಣವಾಗಿ ತಮ್ಮನ್ನು ತಾವು ಮೀಸಲಾಗಿಟ್ಟುಕೊಂಡಿದ್ದರು. 1918ರಲ್ಲಿ ಬಿಜಾಪುರದಲ್ಲಿ ನಡೆದ ಮುಂಬಯಿ ಪ್ರಾಂತೀಯ ಕಾಂಗ್ರೆಸ್ ಸಭೆಯಲ್ಲಿ ಕೌಜಲಗಿ ಶ್ರೀನಿವಾಸರಾಯರು ಸ್ವಾಗತಾಧ್ಯಕ್ಷರಾಗಿ, ಮುಂಬಯಿ ಬ್ಯಾರಿಸ್ಟರ್ ಆಗಿರುವ ವಿಠಲ್‌ಬಾಯಿ ಪಟೇಲರು ಅಧ್ಯಕ್ಷತೆಯನ್ನು ವಹಿಸಿದ್ದರು. ಆಗ ಸಮ್ಮೇಳನಕ್ಕೆ ಲೋಕಮಾನ್ಯ ತಿಲಕ, ಗಾಂಧಿ, ಸರೋಜಿನಿ ನಾಯ್ಡು, ಪದ್ಮಜಾ ನಾಯ್ಡು, ನರಸಿಂಹ ಚಿಂತಾಮಣಿ ಕೇಳ್ಕರ್, ಶಿವರಾಮ ಮಹಾದೇವ ಪರಾಂಜಪೆ, ರಾಜಗೋಪಾಲಚಾರಿ ಮೊದಲಾದ ಮಹಾನ್‌ವ್ಯಕ್ತಿಗಳು ಪಾಲ್ಗೊಂಡು ತಮ್ಮ ಪ್ರಭಾವಿ ಭಾಷಣಗಳಿಂದ ಬಿಜಾಪುರ ಜಿಲ್ಲೆಯಲ್ಲಿ ರಾಷ್ಟ್ರೀಯತೆಯನ್ನು ಅಂಕುರಿಸಿದ್ದರು.[3]

ಅಕ್ಟೋಬರ್ 6, 1905ರಂದು ಲಾರ್ಡ ಕರ್ಜನ್ ಆಡಳಿತ ನೆಪವೊಡ್ಡಿ ಬಂಗಾಳವನ್ನು ವಿಭಜಿಸಿದನು. ಬಂಗಾಳದ ವಿಭಜನೆಯನ್ನು ವಿರೋಧಿಸಿ ಪ್ರಾರಂಭ ಮಾಡಿದ ಅವರ 'ಸ್ವದೇಶಿ ಚಳುವಳಿ' (ಅಗಸ್ಟ್ 17, 1906ರ 'ವಂಗಭಂಗ ಚಳುವಳಿ') ಸ್ವದೇಶಿ ವಸ್ತುಗಳನ್ನು ಬಳಸುವಂತೆ ಮಾಡುವುದು, ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು ಇಲ್ಲವೋ ಸುಡುವುದು ಸ್ವದೇಶಿ ಚಳುವಳಿಯ ಮುಖ್ಯ ಉದ್ದೇಶವಾಗಿತ್ತು. ತಿಲಕರು ಒಂದಡೆ " ನಾವು ಶಸ್ತ್ರ ಸಜ್ಜಿತರಾಗಿಲ್ಲ ಶಸ್ತ್ರಗಳ ಅಗತ್ಯವು ನಮಗಿಲ್ಲ ಅದಕ್ಕಿಂತ ಬಲವಾದ ಆಯುಧ ನಮ್ಮಲ್ಲಿದೆ ಅದು ಬಹಿಷ್ಕಾರ" ಎಂದಿರುವರು.[4] ಭಾರತದಲ್ಲಿ ಇದೊಂದು ಬ್ರಿಟಿಷರ ಮೇಲೆ ಬಂಗಾಳ ವಿಭಜನೆಯ ವಿರುದ್ಧ ಸಾರಿದ ಅಘೋಷಿತ ಯುದ್ಧವಾಗಿತ್ತು. ಈ ಚಳುವಳಿಯಿಂದ ಪ್ರೇರಿತರಾದ ಕನ್ನಡಿಗರು ಅನೇಕ ಪ್ರತಿಭಟನಾ ಸಭೆಗಳನ್ನು ಧಾರವಾಡ, ಆಳ್ಣಾವರ, ಗದಗ, ಬಾಗಲಕೋಟೆ, ಕಿತ್ತೂರು

ಮುಂತಾದೆಡೆಗಳಲ್ಲಿ ಜರುಗಿದವು. ಮುಖ್ಯವಾಗಿ ಲೋಕಮಾನ್ಯ ತಿಲಕರು ಪ್ರಾರಂಭಿಸಿದ ಸ್ವದೇಶ ಪ್ರಚಾರ, ವಿದೇಶಿ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಮತ್ತು ಸ್ವರಾಜ್ಯ ಬೇಡಿಕೆ ಈ ಚತುರ್ತಸೂತ್ರದ ಚಳುವಳಿಯು ಪುಣೆಯ ತರುವಾಯ ಬೆಳಗಾವಿಯಲ್ಲೇ ಪ್ರಖರವಾಗಿತ್ತು. ತಿಲಕರಿಂದ ಪ್ರೇರಿತರಾದ ಗಂಗಾಧರರಾವ್ ದೇಶಪಾಂಡೆ, ಗೋವಿಂದರಾವ್ ಯಾಳಗಿ, ಬಾಬಾಸಾಹೇಬ ಸೋಮಣ್ಣ, ಹಣಮಂತರಾವ್ ದೇಶಪಾಂಡೆ, ರಾಮಚಂದ್ರ ಜೋಶಿ ಮೊದಲಾದವರು ಒಳ್ಳೆಯ ರಭಸದಿಂದ ಚಳುವಳಿಯ ಕಾರ್ಯದಲ್ಲಿ ಭಾಗವಹಿಸಿದರು.

ಬೆಳಗಾವಿಯಲ್ಲಿ ಸ್ವದೇಶಿ ಸ್ಟೋರ್ ತೆರೆಯಲಾಯಿತು. ಗಣೇಶ ವಿದ್ಯಾಲಯ ಎಂಬ ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಲಾಯಿತು. ಕೃಷ್ಣಾಜಿ ಹರಿದೀಕ್ಷಿತ್ ಅದರ ಮುಖ್ಯೋಪಾಧ್ಯಾಯರಾಗಿದ್ದರು. 1907 ರಲ್ಲಿ ಸ್ವಯಂ ಸೇವಕರನ್ನು ಸಂಘಟಿಸಿ ಮದ್ಯದ ಅಂಗಡಿಗಳ ಮೇಲೆ ಪಿಕೆಟಿಂಗ್ ಮಾಡಿದಕ್ಕಾಗಿ ಗೋವಿಂದರಾವ್ ಯಾಳಗಿ, ರಾಮಚಂದ್ರ ಜೋಶಿ ಇತ್ಯಾದಿ 2025 ಜನರು 7 ರಿಂದ 15 ದಿನಗಳವರೆಗೆ ಕಾರಾವಾಸ ಅನುಭವಿಸಿದರು. ಇದು ಕರ್ನಾಟಕದಲ್ಲಿಯೇ ಮೊಟ್ಟ ಮೊದಲನೆಯ ಕಾಯಿದೆಭಂಗ ಹೋರಾಟವಾಗಿತ್ತು.

ಈ ಪ್ರಾಂತ್ಯದಲ್ಲಿ ಪರೋಕ್ಷವಾಗಿ ಬ್ರಿಟೀಷರ ಆಡಳಿತಕ್ಕೆ ಒಳಪಟ್ಟ ಜಮಖಂಡಿ, ಮುಧೋಳ ಮುಂತಾದ ಸಂಸ್ಥಾನಗಳಲ್ಲಿಯೂ ಸಂಸ್ಥಾನಿಕರ ವಿರೋಧದ ನಡುವೆಯು ತಿಲಕರ ಪ್ರಭಾವದಿಂದ ಸ್ವದೇಶಿ ಚಳುವಳಿಯಲ್ಲಿ(1905–06) ಅನೇಕರು ಭಾಗವಹಿಸಿದರು. ಜಮಖಂಡಿ ಸಂಸ್ಥಾನದಲ್ಲಿ ದಾಮೋದರ್ ಹುಲ್ಯಾಳಕರ್, ಶಂಕರರಾವ್ ಕಾರಖಾನೀಸ, ಅನಂತರಾವ್ ಜೋಶಿ, ವಿಠಲರಾವ್ ಕೊಲ್ಹಟಕರ, ಬಂಡೋಪಂತ ವಾಟವೆ ಮೊದಲಾದ ವಿದ್ಯಾರ್ಥಿಗಳು ಸ್ವದೇಶಿ ಪ್ರಚಾರ, ಪೈಸಾ ಫಂಡ್ ಕೂಡಿಸಿ ಕಾಜಿನ ಕಾರಖಾನೆಗೆ ಕಳುಹಿಸುವುದು, ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುವುದು ಮುಂತಾದ ಕೆಲಸದಲ್ಲಿ ತೊಡಗಿದರು. ಗೋವಿಂದರಾವ್ ಕುಲಕರ್ಣಿ, ದಾಮೋದರ್ ಹುಲ್ಯಾಳಕರ್, ಶಂಕರರಾವ್ ಆಪಟೆ, ಫಡಕೆ ವಕೀಲ, ಸದಾಶಿವರಾವ್ ಪೇಡಸೆ ಮೊದಲಾದವರು 1915 ರಲ್ಲಿ ಪುಣೆಯಲ್ಲಿ ನಡೆದ ಮುಂಬಯಿ ಪ್ರಾಂತೀಯ ರಾಜಕೀಯ ಪರಿಷತ್‌ನಲ್ಲಿ ಹಾಗೂ 1916 ರಲ್ಲಿ ಬೆಳಗಾಂನಲ್ಲಿ ನಡೆದ ರಾಜಕೀಯ ಪರಿಷತ್‌ನಲ್ಲಿ ಭಾಗಿಯಾಗಿದ್ದರು. 1917 ರಲ್ಲಿ ಹುಲ್ಯಾಳಕರ್ ಅವರು 'ಪ್ರಜಾ ಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಚಳುವಳಿಯನ್ನು ಮುನ್ನೆಡೆಸಿರುವುದನ್ನು ಕಾಣುತ್ತೇವೆ.[5]

ಮಧೋಳ ಸಂಸ್ಥಾನದಲ್ಲಿ 19ನೇ ಶತಮಾನದ ಆರಂಭದಲ್ಲಿ ಪುಣೆಗೆ ಶಿಕ್ಷಣ ಕಲಿಯಲು ಹೋಗಿದ್ದ ಅನೇಕ ವಿದ್ಯಾರ್ಥಿಗಳು ರಜಾ ಸಮಯದಲ್ಲಿ ಬಂದಾಗ 'ಶಿವಾಜಿ ಪ್ಲೇಯಿಂಗ್‌ಕ್ಲಬ್' ಸ್ಥಾಪಿಸಿದರು. ಇದರ ಮೂಲಕ ಶಿವಾಜಿ ಮತ್ತು ಗಣೇಶ ಉತ್ಸವಗಳನ್ನು ಆಚರಿಸಲು ಪ್ರಾರಂಭಿಸಿದರು. ಸ್ವದೇಶಿ ಚಳುವಳಿಯ ಕಾಲಕ್ಕೆ ತಾತ್ಯಾ ತಾಸಗಾಂವಕರ್, ಅನಂತರಾವ್ ಬೆಳವಡಿ ಮೊದಲಾದವರು ಪೈಸಾ ಫಂಡ್, ಮುಷ್ಟಿ ಫಂಡ್ ಸಂಗ್ರಹಿಸುವುದು, ಸ್ವದೇಶಿ ಪ್ರಚಾರದ ಜೊತೆಗೆ 'ವಾಗ್ಭೂಷಣ' ಎಂಬ ಹಸ್ತ ಲಿಕಿತ ಪತ್ರಿಕೆ ಪ್ರಕಟಣೆ ಆರಂಭಿಸಿದರು. ಇದೇ ಸಮಯದಲ್ಲಿ ಹಣಮಂತರಾವ್ ಕೌಜಲಗಿ ಹಾಗೂ ಅವರ ಸೋದರ ತಿರುಮಲರಾವ್ ಇವರು ವಿದ್ಯಾರ್ಥಿಗಳಲ್ಲಿ ಸ್ವದೇಶಿ ಪ್ರಚಾರ, ವಿದೇಶಿ ಬಹಿಷ್ಕಾರ ಚಳುವಳಿ ಜಾಗೃತಿಯನ್ನು ಮೂಡಿಸಿದರು. ಪರದೇಶಿ ವಸ್ತುಗಳ ಅಂಗಡಿಯ ಮುಂದೆ ಪಿಕೆಟಿಂಗ್ ನಡೆಸಿದರು. ಸ್ವದೇಶಿ ವಸ್ತುಗಳ ಪ್ರಚಾರದ ಅಂಗವಾಗಿ ತೆಂಗಿನ ಪರಟೆಯಿಂದ ಗುಂಡಿ, ಕುದುರೆ ಬಾಲದ ಕೂದಲಿನಿಂದ ಬ್ರಷ್ ಇವುಗಳನ್ನು ವಿದ್ಯಾರ್ಥಿ ವೃಂದವು ತಯಾರಿಸುತ್ತಿರುವುದನ್ನು ಕಾಣುತ್ತೇವೆ. 1906 ರಿಂದ 1908 ರ ವರೆಗೆ ಈ ಚಳುವಳಿ ಸಂಸ್ಥಾನದಲ್ಲಿ ಸಾಗಿರುವುದನ್ನು ಗುರ್ತಿಸಬಹುದು.

1910 ರಲ್ಲಿ ಲೋಕಮಾನ್ಯರ ಸ್ವದೇಶಿ, ರಾಷ್ಟ್ರೀಯ ಶಿಕ್ಷಣ, ಪರದೇಶಿ ವಸ್ತು ಬಹಿಷ್ಕಾರದ ಚಳುವಳಿಯು ಉಗ್ರವಾಗಿಯೇ ನಡೆಯಿತು. ಗಂಗಾಧರರಾವ್ ದೇಶಪಾಂಡೆ ಬೆಳಗಾವಿಯಲ್ಲಿ 'ಸ್ವದೇಶಿ' ಎಂಬ ರಾಷ್ಟ್ರೀಯ ಶಾಲೆಯನ್ನು ಶುರು ಮಾಡಿದರು. ಹುನುಗುಂದದ ಮಧ್ವರಾವ್ ರಾ ಪ್ಯಾಟಿ 1908 ರಿಂದಲೇ ಸ್ವಾತಂತ್ರ್ಯಕ್ಕಾಗಿ ದುಡಿಯುತ್ತಿದ್ದರು, ಸ್ವದೇಶಿ ಚಳುವಳಿ ಆರಂಭವಾದಾಗ ಸ್ವದೇಶಿ ವಸ್ತುಗಳನ್ನೇ ಕೊಳ್ಳಿರಿ ಅಂತ ಪ್ರಚಾರ ಮಾಡಿದರು. ದಿ. ಹಣಮಂತರಾವ್ ಕೌಜಲಗಿ ದಿ.ರಾಘವೇಂದ್ರರಾವ್ ದೇಸಾಯಿ ಇವರ ನೇತೃತ್ವದಲ್ಲಿ 'ಚರಕ ಸಂಘವನ್ನು' ಸ್ಥಾಪಿಸಿ ಅದರ ನೇತಾರರಾಗಿ ದುಡಿದರು. ಇವರು ಕೂಡ ಆರಂಭದಲ್ಲಿ ತಿಲಕರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ್ದರು. ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ದಿನೇ ದಿನೇ ಮಂದಗಾಮೀ ತೀವ್ರಗಾಮಿಗಳ ನಡುವೇ ಅಂತರ ಹೆಚ್ಚಾಗುತ್ತಾ ಹೋಯಿತು. 26 ಡಿಸೆಂಬರ್ 1907 ರಲ್ಲಿ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ ಸೂರತ್‌ನಲ್ಲಿ ನಡೆಯಿತು. ಇಲ್ಲಿ ಮಂದಗಾಮಿ ಮತ್ತು ತೀವ್ರಗಾಮಿಗಳ ನಡುವೇ ಭಿನ್ನಾಭಿಪ್ರಾಯಗಳು ತಲೆದೂರಿ ಕಾಂಗ್ರೆಸ್ ಇಬ್ಭಾಗವಾಯಿತು. ಇಲ್ಲಿನ ವಾರ್ಷಿಕ ಅಧಿವೇಶನಕ್ಕೆ ತೀವ್ರಗಾಮಿಗಳು ಲಾಲಾಲಜಪತರಾಯರನ್ನು ಅಧ್ಯಕ್ಷರೆಂದು ಘೋಷಿಸಿದರು. ಆದರೆ ಮಂದಗಾಮಿಗಳು ರಾಜ್ ಬಿಹಾರಿ ಘೋಷ್‌ರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ಜೊತೆಗೆ ತಿಲಕರಿಗೆ ವೇದಿಕೆಗೆ ಅವಕಾಶವನ್ನು ನೀಡಲಿಲ್ಲ ಕಾರಣಕ್ಕೆ ಗಲಾಟೆಗಳು ನಡೆದವು.

ಸೂರತ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ತಿಲಕರಿಂದ ಪ್ರೇರಿತರಾದ ಮುಂಬಯಿ ಪ್ರಾಂತ್ಯದ ಕನ್ನಡ ಭಾಷಾ ಪ್ರದೇಶದಲ್ಲಿನ ಬೆಳಗಾವಿಯಿಂದ ಗಂಗಾಧರರಾವ್ ದೇಶಪಾಂಡೆ, ಗೋವಿಂದ್‌ರಾವ್ ಯಾಳಗಿ, ಧಾರವಾಡದಿಂದ, ಆಲೂರು ವೆಂಕಟರಾವ್, ಅಣ್ಣಾಚಾರ್ಯ ಹೊಸಕೇರಿ, ಬಿಜಾಪುರದಿಂದ ಶ್ರೀನಿವಾಸರಾವ್ ಕೌಜಲಗಿ ಮುಂತಾದವರು ಹೋಗಿದ್ದರು. ಅಲ್ಲಿ ನಡೆದ ತೀವ್ರಗಾಮಿ ಮತ್ತು ಮಂದಗಾಮಿಗಳ ನಡುವಣ ದ್ವಂದ್ವದಲ್ಲಿ ಇವರೆಲ್ಲ ತಿಲಕರ ಪರವಾಗಿ ಪಾಲ್ಗೊಂಡಿದ್ದರು. ಅಷ್ಟೇ ಅಲ್ಲದೆ ತೀವ್ರಗಾಮಿ ನಾಯಕರಿಂದ ಪ್ರೇರಿತವಾದ ಗೋವಿಂದರಾವ್ ಯಾಳಗಿ, ಹನುಮಂತರಾವ್ ದೇಶಪಾಂಡೆ ಮುಂತಾದವರು 'ಮ್ಯೂಜಿನಿ ಕ್ಲಬ್' ಎಂಬ ಗುಪ್ತ ಕ್ರಾಂತಿಕಾರಿ ತಂಡವನ್ನು 1907 ರಲ್ಲಿ ಸ್ಥಾಪಿಸಿದರು. ಗಂಗಾಧರರಾವ್ ದೇಶಪಾಂಡೆಯವರು ಬೆಳಗಾಂನಲ್ಲಿ ಮೊದಮೊದಲು ಮರಾಠಿಯಲ್ಲಿಯೇ ಅವರ ಭಾಷಣ ಮಾಡುತ್ತಿದ್ದರು. ಕರ್ನಾಟಕದ ಕಾರ್ಯಕ್ಷೇತ್ರ ಸ್ವಾತಂತ್ರ್ಯ ಚಳುವಳಿಗೆ ಜಾಗೃತಗೊಳಿಸಬೇಕಾದರೆ ಕನ್ನಡದಲ್ಲಿಯೇ ಭಾಷಣ ಮಾಡಬೇಕೆಂದು ಲೋಕಮಾನ್ಯ ತಿಲಕರೇ ಸೂಚಿಸಿದ ಮೇಲೆ ಕನ್ನಡದಲ್ಲಿ ಅವರು ಭಾಷಣ ಮಾಡಲು ಪ್ರಾರಂಭಿಸಿದರು.

ಲೋಕಮಾನ್ಯ ತಿಲಕರು 1914 ರಲ್ಲಿ ಮಂಡೇಲಾ ಸೆರೆಮನೆಯಿಂದ ಬಿಡುಗಡೆ ಹೊಂದಿ ಬರುತ್ತಲೇ ಬೆಳಗಾವಿ ಜಿಲ್ಲೆಯಲ್ಲಿ ಅವರ 'ಹೋಮ್‌ರೋಲ್' ಚಳುವಳಿ ಪ್ರಬಲಗೊಂಡಿತು. 1916 ರಲ್ಲಿ ಲೋಕಮಾನ್ಯ ತಿಲಕರ 'ಹೋಮ್‌ರೂಲ್ ಲೀಗ್' (ಸ್ವರಾಜ್ಯ ಸಂಘ) ಬೆಳಗಾವಿಯಲ್ಲಿ ಸ್ಥಾಪಿಸಿ ಪ್ರಚಾರ ಕೈಗೊಂಡರು. ಹಾಗೆಯೇ ನಿಪ್ಪಾಣಿ ಮತ್ತು ಸಂಕೇಶ್ವರಗಳಿಗೆ ಭೇಟಿ ನೀಡಿದರು. ಗಂಗಾಧರರಾವ್ ದೇಶಪಾಂಡೆ, ಗೋವಿಂದರಾವ್ ಯಾಳಗಿ ಇವರು ಲೋಕಮಾನ್ಯರ "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ನಾನು ಪಡೆದುಕೊಳ್ಳುತ್ತೇನೆ" ಎಂಬ ಅವರ ಸಂದೇಶದ ಹರಿಕಾರರಾಗಿ ಈ ಭಾಗದಲ್ಲಿ ಸ್ವರಾಜ್ಯದ ಚಳುವಳಿಯನ್ನು ಮುನ್ನಡೆಸಿದರು. ಬೆಳಗಾವಿಯಲ್ಲಿಯೇ ಚಳುವಳಿಯ ಪ್ರಮುಖ ಕೇಂದ್ರವಾಗಿದ್ದರೂ ಅಥಣಿ, ಚಿಕ್ಕೋಡಿ, ಸಂಕೇಶ್ವರ, ಪಚ್ಚಾಪೂರ, ಕಿತ್ತೂರ, ಬೈಲಹೊಂಗಲ್, ಮುಂತಾದ ಸ್ಥಳಗಳಿಗೂ ವಿಸ್ತರಿಸಿತು.[6] ಸ್ವರಾಜ್ಯದ, ಸ್ವಾತಂತ್ರ್ಯದ ಸಸಿಯನ್ನು ಭಾರತೀಯ

ಮನೋಭೂಮಿಕೆಯಲ್ಲಿ ಮೊಟ್ಟಮೊದಲು ನೆಟ್ಟ ಶ್ರೇಯಸ್ಸು ಲೋಕಮಾನ್ಯ ತಿಲಕರಿಗೆ ಸಲ್ಲುವಂತೆ ಇವರ ಪ್ರೇರಣೆಯಿಂದ ಆ ಕಾರ್ಯವನ್ನು ಮುಂಬಯಿ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಮಾಡಿದ ಶ್ರೇಯಸ್ಸು ಗಂಗಾಧರರಾವ್ ದೇಶಪಾಂಡೆಯವರಿಗೆ ಸಲ್ಲುತ್ತದೆ. ಗಂಗಾಧರರಾವ್ ಅವರು ಸ್ವಾತಂತ್ರ್ಯ ದೀಕ್ಷೆಯನ್ನು ಪಡೆದಿದ್ದು, ಲೋಕಮಾನ್ಯರಿಂದಲೇ 1920ನೇ ಇಸವಿಯವರೆಗೆ ಬೆಳಗಾವಿ ಜಿಲ್ಲೆಯೇ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಕೇಂದ್ರವಾಗಿತ್ತು.

1916ನೇ ಇಸವಿಯಲ್ಲಿ 'ಮುಂಬಯಿ ಪ್ರಾಂತೀಯ ರಾಜಕೀಯ ಪರಿಷತ್ತು' ಬೆಳಗಾವಿಯಲ್ಲಿಯೇ ನಡೆಯಿತು. ಇಲ್ಲಿ ಕೂಡ ತಿಲಕರು ಭಾಗವಹಿಸಿದ್ದರು. ಮತ್ತು 1916ರಲ್ಲಿ ತಿಲಕರು ಆರಂಭಿಸಿದ ಹೋಮ್‌ರೂಲ್ ಚಳುವಳಿಯಿಂದ ಉತ್ಸಾಹಿತರಾಗಿ ಮುಂದೆ ಬಂದ ಗಂಗಾಧರರಾವ್ ದೇಶಪಾಂಡೆಯವರ ಹಿರಿತನದಲ್ಲಿ ಧಾರವಾಡದಲ್ಲಿಯೇ 'ಹೋಮ್‌ರೂಲ್ ಲೀಗ್'ನ ಕರ್ನಾಟಕ ಶಾಖೆಯನ್ನು ಸ್ಥಾಪಿಸಲ್ಪಟ್ಟಿತ್ತು. ಮುಂದೆ ರಾಜಕೀಯ ಹಾಗೂ ಆಡಳಿತ ದೃಷ್ಟಿಯಿಂದ ಕರ್ನಾಟಕಕ್ಕೆ ಒಂದು ಅಸ್ತಿತ್ವವಿರಬೇಕೆಂಬ ಭಾವನೆ ಬೆಳೆದದ್ದೂ ಇದೇ ಕಾಲದಲ್ಲಿ ಈ ವಿಷಯವನ್ನು ಜನರಲ್ಲಿ ಬಿಂಬಿಸುವುದಕ್ಕಾಗಿ ಆಲೂರರು ಮತ್ತು ಕಡಪಾ ರಾಘವೇಂದ್ರರಾಯರು 'ಕರ್ನಾಟಕ ಸಭೆ'ಯನ್ನು ಧಾರವಾಡದಲ್ಲಿ ಸ್ಥಾಪಿಸಿದರು. ಇದಕ್ಕೆ ಮೂಲ ಪ್ರೇರಣೆ ತಿಲಕರ ಹೋಮ್‌ರೂಲ್ ಲೀಗ್ ಆಗಿತ್ತು. ಈ ಲೀಗ್‌ನ ಪ್ರಚಾರಕ್ಕಾಗಿ 1917 ರಲ್ಲಿ ಚಿಕ್ಕೋಡಿಗೂ ಭೇಟಿ ನೀಡಿ ಅಲ್ಲಿ ಭಾಷಣ ಮಾಡುವ ಮೂಲಕ ಸ್ವಾತಂತ್ರ್ಯ ಚಳುವಳಿಯ ಜಾಗೃತಿಯನ್ನು ಮೂಡಿಸಿದರು.

ರಾಷ್ಟ್ರೀಯತೆಯ ಉದಯದ ಈ ಕಾಲದಲ್ಲಿ ತಿಲಕರ ಪ್ರಭಾವ ಅಪಾರವಾಗಿತ್ತು. ಧಾರವಾಡ, ಸಿದ್ಧಾಪುರ, ಮುಲ್ಕಿಗಳಲ್ಲಿ 'ಹೋಮ್‌ರೂಲ್ ಲೀಗ್'ನ ಶಾಖೆಗಳಿದ್ದವು. ಸ್ವಾತಂತ್ರ್ಯ ಹೋರಾಟಕ್ಕಾಗಿ ಜನರನ್ನು ಸಿದ್ಧಗೊಳಿಸುವುದು ಹೇಳುವಷ್ಟು ಸುಲಭದ ಕೆಲಸವಲ್ಲ, ಕೆಲ ಮಟ್ಟಿಗೆ ಭಾರತೀಯ ಭಾಷಾ ಪತ್ರಿಕೆಗಳು, ಸಾಹಿತ್ಯ ಇಂತಹ ಕೆಲಸ ಮಾಡುತ್ತಿದ್ದವು. ಆದರೆ ಬಹುತೇಕ ಶೇಕಡಾ 90 ಕ್ಕಿಂತ ಹೆಚ್ಚು ಜನ ನಿರಕ್ಷರಿಗಳು, ಜನಕೋಟಿಯ ಮುಖ್ಯ ಭಾಗವಾಗಿದ್ದ ಹಿಂದೂ ಜನರನ್ನು ಮುಟ್ಟುವಂತಹ ಯಾವುದೇ ಸಂಪರ್ಕ ವ್ಯವಸ್ಥೆ ಇರಲಿಲ್ಲ. ಮುಸ್ಲಿಂ, ಕ್ರೈಸ್ತ ಮತ್ತು ಸಿಖ್ ಜನರ ನಡುವೆ ಮಸೀದಿ ಚರ್ಚು, ಗುರುದ್ವಾರಗಳು ಅಂತಹ ಒಂದು ವ್ಯವಸ್ಥೆಯನ್ನು ಒದಗಿಸಿದ್ದರೂ ಹಿಂದೂಗಳ ಮಟ್ಟಿಗೆ ಅಂತಹ ಯಾವ ಒಂದು ವ್ಯವಸ್ಥೆಯೂ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯದ ಸಂದೇಶವನ್ನು ಈ ಜನರಲ್ಲಿ ಹರಡಲು ಮಹಾರಾಷ್ಟ್ರದಲ್ಲಿ ಹೊಸ ವಿಧಾನವನ್ನು ರೂಪಿಸುವ ಅಗತ್ಯ ಹುಟ್ಟಿತು. ಬಾಲಗಂಗಾಧರ ತಿಲಕರು 1894 ರಲ್ಲಿ ಗಣೇಶೋತ್ಸವ, 1896 ರಲ್ಲಿ ಶಿವಾಜಿ ಉತ್ಸವಗಳನ್ನು ಏರ್ಪಡಿಸಿದರು. ಹಿಂದೂ ದೇವರಗಳನ್ನು ರಾಜಕೀಯ ಸಂಕೇತವಾಗಿ ಜನಜಾಗೃತಿಗಾಗಿ ಪ್ರಚಾರಪಡಿಸಿದರು.[7] ಈ ಉತ್ಸವಗಳು ಮುಂಬಯಿ ಪ್ರಾಂತ್ಯದ ಕನ್ನಡ ನೆಲಕ್ಕೂ ವಿಸ್ತರಣೆಗೊಂಡು ಬೆಳಗಾಂ, ಬಿಜಾಪುರ, ಧಾರವಾಡ, ಹುಬ್ಬಳ್ಳಿ, ಸಿರಸಿ ಮುಂತಾದೆಡೆಗಳಲ್ಲಿ ಗಣಪತಿ ಮತ್ತು ಶಿವಾಜಿ ಉತ್ಸವವನ್ನು ಸಾರ್ವಜನಿಕವಾಗಿ ಆಚರಿಸುವ ಪದ್ಧತಿ ಜಾರಿಗೆ ಬಂದಿತು. ಇಂದಿಗೂ ಕೂಡ ಬೆಳಗಾಂ ಮತ್ತು ಹುಬ್ಬಳ್ಳಿ ನಗರಗಳಲ್ಲಿ ಶಿವಾಜಿ ಮತ್ತು ಗಣೇಶೋತ್ಸವವನ್ನ ಅದ್ದೂರಿಯಾಗಿ ಆಚರಿಸುವುದನ್ನು ಕಾಣುತ್ತೇವೆ. 1920 ಅಗಸ್ಟ್ 1 ರಂದು ತಿಲಕರು ಮರಣ ಹೊಂದಿದ ಸಂದರ್ಭದಲ್ಲೂ ಇಡೀ ಕನ್ನಡ ನಾಡಿನಿಂದ ಸಾವಿರಾರು ಜನರು ಭಾಗಿಯಾಗಿದ್ದನ್ನು ಕೂಡ ಕಾಣುತ್ತೇವೆ.

**ಕೊನೆ ಟಿಪ್ಪಣಿಗಳು:**


1. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 2009, ಪುಟ 456
2. ಸೂರ್ಯನಾಥ ಕಾಮತ್(ಸಂ)., ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು(ಪ್ರಥಮ ಸಂಪುಟ), ಗೀತಾ ಬುಕ್ ಹೌಸ್, ಮೈಸೂರು, 1974, ಪುಟ 139
3. ಅದೇ, ಪುಟ 1179
4. ಶಂಕರ ಘೋಷ, ಪೊಲಿಟಿಕಲ್ ಐಡಿಯಾಸ್ ಅಂಡ್ ಮೊಮೆಂಟ್ಸ್ ಇನ್ ಇಂಡಿಯಾ, ಅಲ್ಲೀಯಡ್ ಪಬ್ಲಿಷರ್ಸ್, 1975, ಪುಟ 73
5. ಸೂರ್ಯನಾಥ ಕಾಮತ್(ಸಂ)., ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು(ದ್ವಿತೀಯ ಸಂಪುಟ), ಗೀತಾ ಬುಕ್ ಹೌಸ್, ಮೈಸೂರು, 1974, ಪುಟ 955
6. ಸೂರ್ಯನಾಥ ಕಾಮತ್(ಸಂ)., ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು(ಪ್ರಥಮ ಸಂಪುಟ), ಗೀತಾ ಬುಕ್ ಹೌಸ್, ಮೈಸೂರು, 1974, ಪುಟ 986
7. ಶಂಕರನಾರಾಯಣರಾವ್ ಎನ್.ಪಿ., ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕದ (ಒಂಬತ್ತನೆ ಮುದ್ರಣ), 2013, ಪುಟ 138



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.